# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 801 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 29-12-2022 |
| ಉತ್ತರಿಸುವವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚೆಗೆ ಸರ್ಕಾರ ಆನೆ ಮತ್ತು ಕಾಡು ಪ್ರಾಣಿಗಳ ಹಾವಳಿಗಳನ್ನು ತಡೆಗಟ್ಟುವ ಸಲುವಾಗಿ ಟಾಸ್ಕ್ ಫೋರ್ಸ್ ಸಮಿತಿಯನ್ನು ರಚನೆ ಮಾಡಲಾಗಿದೆಯೆ; | ಹೌದು. ಸರ್ಕಾರದ ಆದೇಶ ಸಂಖ್ಯೆ: ಅಪಜೀ 170 ಎಫ್ ಡಬ್ಲ್ಯೂಎಲ್ 2022 ದಿನಾಂಕ: 21.11.2022 ರಲ್ಲಿ ಕಾಡಾನೆ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಆನೆ ಕಾರ್ಯಪಡೆ (Elephant task force) ಯನ್ನು ರಚಿಸಲಾಗಿರುತ್ತದೆ. |
| ಆ) | ಮಾಡಿದ್ದಲ್ಲಿ, ರಾಜ್ಯದ ಯಾವ ಯಾವ ಜಿಲ್ಲೆಗಳನ್ನು ಈ ಸಮಿತಿಗೆ ಸೇರಿಸಲಾಗಿದೆ. (ವಿವರ ನೀಡುವುದು) | ಕಾಡಾನೆ ಹಾವಳಿಯನ್ನು ತಡೆಗಟ್ಟಲು ಜಿಲ್ಲಾ ಆನೆ ಕಾರ್ಯಪಡೆ (Elephant task force) ನ್ನು ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ರಚಿಸಲಾಗಿರುತ್ತದೆ.<br><br>Elephant task force ಆದೇಶದ ಪ್ರತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಇ) | ಹಾಗಿದ್ದಲ್ಲಿ, ಚಾಮರಾಜನಗರ ಜಿಲ್ಲೆಯಲ್ಲಿ ಈ ಟಾಸ್ಕ್‌ಫೋರ್ಸ್ ಸಮಿತಿಯಿಂದ ಕೈಬಿಡಲು ಕಾರಣವೇನು: (ವಿವರ ನೀಡುವುದು) | ಇತ್ತೀಚಿನ ದಿನಗಳಲ್ಲಿ ಹಾಸನ, ಚಿಕ್ಕಮಗಳೂರು, ಮೈಸೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಆನೆ ಸಂರಕ್ಷಿತ ಪ್ರದೇಶಗಳ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕಾಡಾನೆ ಹಾವಳಿ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಪ್ರಸ್ತುತದ ಪರಿಸ್ಥಿತಿಯ ಗಂಭೀರತೆಯನ್ನು ಅವಲೋಕಿಸಿ, ಅದರನ್ವಯ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಸದರಿ ಮೇಲ್ಕಂಡ ಜಿಲ್ಲೆಗಳಲ್ಲಿ ಜಿಲ್ಲೆಗೊಂದರಂತೆ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳನ್ನೊಳಗೊಂಡಂತೆ ಜಿಲ್ಲಾ Elephant Task Force ಅನ್ನು ಸರ್ಕಾರದ ಆದೇಶ ಸಂಖ್ಯೆ: ಅಪಜೀ 170 ಎಫ್‌ಡಬ್ಲ್ಯೂಎಲ್ 2022, ದಿನಾಂಕಃ 21.11.2022ರಲ್ಲಿ ರಚಿಸಿ ಆದೇಶಿಸಲಾಗಿದೆ.<br><br>ಚಾಮರಾಜನಗರ ಜಿಲ್ಲೆಯಲ್ಲಿ ಪರಿಣಾಮಕಾರಿ ಗಸ್ತು ತಿರುಗುವಿಕೆ ಮತ್ತು ಮಾನವ-ಆನೆ ಸಂಘರ್ಷಕ್ಕಾಗಿ ನಿರ್ಮಿಸಲಾದ ವಿವಿಧ ತಡೆಗೋಡೆಗಳಾದ ಆನೆ ತಡೆ ಕಂದಕ, ಸೋಲಾರ್ ತಂತಿ ಬೇಲಿ ನಿರ್ಮಾಣ, ರೈಲ್ವೆ ಬ್ಯಾರಿಕೇಡ್ ನಿರ್ಮಾಣಗಳಿಂದಾಗಿ ಮಾನವ-ಆನೆ ಸಂಘರ್ಷದ ಸಮಸ್ಯೆಗಳು ಮತ್ತು ಇದರಿಂದ ಮಾನವ ಪ್ರಾಣ-ಹಾನಿ ಪ್ರಮಾಣವು ನಿಯಂತ್ರಣದಲ್ಲಿರುವುದರಿಂದ, ಚಾಮರಾಜನಗರ ಜಿಲ್ಲೆಯಲ್ಲಿ ಆನೆ ಕಾರ್ಯಪಡೆಯನ್ನು ರಚಿಸಲಾಗಿರುವುದಿಲ್ಲ. ಕಳೆದ 2 ವರ್ಷಗಳಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ವನ್ಯಪ್ರಾಣಿಗಳಿಂದ ಉಂಟಾದ ಮಾನವ ಪ್ರಾಣಹಾನಿ ಪ್ರಕರಣಗಳ ವಿವರ ಕೆಳಕಂಡಂತಿದೆ:- |

...2

(ರೂ ಲಕ್ಷಗಳಲ್ಲಿ )

| ವರ್ಷ | ಮಾನವ ಪ್ರಾಣ ಹಾನಿ ಪ್ರಕರಣಗಳ ಸಂಖ್ಯೆ | ಪಾವತಿಸಲಾದ ಮೊತ್ತ |
|---|---|---|
| 2020-21 | 3 | 22.50 |
| 2021-22 | 2 | 15.00 |

ಮುಂದುವರೆದು ಕಳೆದ 2 ವರ್ಷಗಳಲ್ಲಿ ನಿರ್ಮಿಸಲಾದ ವಿವಿಧ ಬ್ಯಾರಿಕೇಡ್ ಗಳ ವಿವರ ಕೆಳಕಂಡಂತಿದೆ:-

| ಕಾಮಗಾರಿ ವಿವರ | 2020-21 | 2021-22 |
|---|---|---|
| | ವಿಸ್ತೀರ್ಣ ಕಿ.ಮೀ | ವಿಸ್ತೀರ್ಣ ಕಿ.ಮೀ |
| ಆನೆ ತಡೆ ಕಂದಕ | 15.80 | 23.21 |
| ಸೋಲಾರ್ / ಟೆಂಟಕಲ್ ತಂತಿಬೇಲಿ | 164.50 | 126.114 |
| ರೈಲ್ವೇ ಬ್ಯಾರಿಕೇಡ್ | 18.38 | 11.25 |

ಈ) ಚಾಮರಾಜನಗರ ಜಿಲ್ಲೆಯಲ್ಲಿ ಶೇಕಡಾ 50 ರಷ್ಟು ಅರಣ್ಯ ಪ್ರದೇಶದಿಂದ ಕೂಡಿದ್ದು, ಸುಮಾರು ಎರಡು ಸಾವಿರಕ್ಕೂ ಹೆಚ್ಚು ಆನೆಗಳು ಈ ಜಿಲ್ಲೆಯಲ್ಲಿ ವಾಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಉ) ಈ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಆನೆಗಳು ಮತ್ತು ಕಾಡು ಪ್ರಾಣಿಗಳಿಂದ ಪ್ರಾಣ ಕಳೆದುಕೊಂಡಿರುವರ ಸಂಖ್ಯೆ ಎಷ್ಟು; ರೈತರ ಬೆಳೆ ಹಾನಿಯಾದ ಪ್ರಮಾಣವೆಷ್ಟು; (ವಿವರ ನೀಡುವುದು)

ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ವನ್ಯ ಪ್ರಾಣಿ ದಾಳಿಯಿಂದ ಉಂಟಾದ ಮಾನವ-ಪ್ರಾಣ ಹಾನಿ ಪ್ರಕರಣಗಳಿಗೆ ಪಾವತಿಸಲಾದ ದಯಾತ್ಮಕ ಧನದ ವಿವರ ಕೆಳಕಂಡಂತಿದೆ:-

(ರೂ.ಲಕ್ಷಗಳಲ್ಲಿ)

| 2020-21 | | 2021-22 | |
|---|---|---|---|
| ಪ್ರಕರಣ | ಪಾವತಿಸಿದ ಮೊತ್ತ | ಪ್ರಕರಣ | ಪಾವತಿಸಿದ ಮೊತ್ತ |
| 3 | 22.50 | 2 | 15.00 |

ವನ್ಯ ಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆ ನಾಶವನ್ನು ಕೆ.ಜಿ/ಕ್ವಿಂಟಾಲ್ ಗಳಲ್ಲಿ ಮೌಲ್ಯಮಾಪನ ಮಾಡಿ ಪರಿಹಾರ ನೀಡಲಾಗುತ್ತಿದ್ದು, ಕಳೆದ 2 ವರ್ಷಗಳಲ್ಲಿ ಉಂಟಾಧ ಬೆಳೆ ಹಾನಿಗೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳಿಗೆ ಪಾವತಿಸಲಾದ ದಯಾತ್ಮಕ ಧನದ ವಿವರ ಕೆಳಕಂಡಂತಿದೆ:-

(ರೂ.ಲಕ್ಷಗಳಲ್ಲಿ)

| 2020-21 | | 2021-22 | |
|---|---|---|---|
| ಪ್ರಕರಣ | ಪಾವತಿಸಿದ ಮೊತ್ತ | ಪ್ರಕರಣ | ಪಾವತಿಸಿದ ಮೊತ್ತ |
| 1582 | 103.93 | 2256 | 146.96 |

| | | |
|---|---|---|
| ಊ) | ಚಾಮರಾಜನಗರ ಜಿಲ್ಲೆಯಲ್ಲಿ ಟಾಸ್ಕ್ ಫೋರ್ಸ್ ಸಮಿತಿಯಿಂದ ಏಕೆ ಕೈ ಬಿಡಲಾಯಿತು ಮತ್ತು ಈಗಲಾದರೂ ಸರ್ಕಾರವು ಚಾಮರಾಜನಗರ ಜಿಲ್ಲೆಯನ್ನು ಟಾಸ್ಕ್ ಫೋರ್ಸ್ ಸಮಿತಿಯ ಕಾರ್ಯಪಡೆಗೆ ಸೇರಿಸಲಾಗುವುದೇ? (ವಿವರ ನೀಡುವುದು) | ಚಾಮರಾಜನಗರ ಜಿಲ್ಲೆಯಲ್ಲಿ ಪರಿಣಾಮಕಾರಿ ಗಸ್ತು ತಿರುಗುವಿಕೆ ಮತ್ತು ಮಾನವ-ಆನೆ ಸಂಘರ್ಷಕ್ಕಾಗಿ ನಿರ್ಮಿಸಲಾದ ವಿವಿಧ ತಡೆಗೋಡೆಗಳಾದ ಆನೆ ತಡೆ ಕಂದಕ, ಸೋಲಾರ್ ತಂತಿ ಬೇಲಿ ನಿರ್ಮಾಣ, ರೈಲ್ವೆ ಬ್ಯಾರಿಕೇಡ್ ನಿರ್ಮಾಣಗಳಿಂದಾಗಿ ಮಾನವ-ಆನೆ ಸಂಘರ್ಷದ ಸಮಸ್ಯೆಗಳು ಮತ್ತು ಇದರಿಂದ ಮಾನವ ಪ್ರಾಣ-ಹಾನಿ ಪ್ರಮಾಣವು ನಿಯಂತ್ರಣದಲ್ಲಿರುವುದರಿಂದ, ಚಾಮರಾಜನಗರ ಜಿಲ್ಲೆಯಲ್ಲಿ ಆನೆ ಕಾರ್ಯಪಡೆಯನ್ನು ರಚಿಸಲಾಗಿರುವುದಿಲ್ಲ. |

**ಸಂಖ್ಯೆ: ಅಪಜೀ 199 ಎಫ್‌ಡಬ್ಲ್ಯೂಎಲ್ 2022**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ

ಅನುಬಂಧ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾಡಾನೆ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾ Elephant Task Force ರಚಿಸುವ ಬಗ್ಗೆ.

*****

ಪ್ರಸ್ತಾವನೆ:

ಇತ್ತೀಚಿನ ದಿನಗಳಲ್ಲಿ ಹಾಸನ, ಚಿಕ್ಕಮಗಳೂರು, ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಮತ್ತು ಇನ್ನಿತರ ಜಿಲ್ಲೆಗಳಲ್ಲಿ ಆನೆ ಸಂರಕ್ಷಿತ ಪ್ರದೇಶಗಳ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕಾಡಾನೆ ಹಾವಳಿ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿದೆ. ಈ ಹಾವಳಿಯಿಂದ ಬೆಳೆಹಾನಿ ಅಲ್ಲದೇ ಮಾನವ-ಪ್ರಾಣಹಾನಿ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿದೆ. ಆದುದರಿಂದ, ಮೇಲೆ ನಮೂದಿಸಿದ ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೊಂದು **Elephant Task Force** ರಚಿಸಲು ಉದ್ದೇಶಿಸಲಾಗಿದೆ.

ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಅಪಜೀ 170 ಎಫ್‌ಡಬ್ಲ್ಯೂಎಲ್ 2022,**
**ಬೆಂಗಳೂರು, ದಿನಾಂಕ: 21-11-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿರುವ ಭಾಗಗಳಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೊಂದರಂತೆ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳನ್ನೊಳಗೊಂಡ ಜಿಲ್ಲಾ **Elephant Task Force** ನ್ನು ರಚಿಸಿ ಆದೇಶಿಸಿದೆ.

| ಕ್ರ.ಸಂ | ಹುದ್ದೆ | ಸಂಖ್ಯೆ |
|---|---|---|
| 1. | ಉಪ ಅರಣ್ಯ ಸಂರಕ್ಷಣಾಧಿಕಾರಿ | 01 |
| 2. | ಸಹಾಯಕ ಅರಣ್ಯ ಉಪ ಸಂರಕ್ಷಣಾಧಿಕಾರಿ | 01 |
| 3. | ವಲಯ ಅರಣ್ಯಾಧಿಕಾರಿ | 01 |
| 4. | ಉಪ ವಲಯ ಅರಣ್ಯಾಧಿಕಾರಿ | 04 |
| 5. | ಅರಣ್ಯ ರಕ್ಷಕರು | 08 |
| 6. | ಹೊರಗುತ್ತಿಗೆ ಸಿಬ್ಬಂದಿಗಳು | 32 |

1. ಈ ಜಿಲ್ಲಾ Task Force ಗಳ ಕೇಂದ್ರಸ್ಥಾನಗಳು ಈ ಕೆಳಕಂಡಂತಿದೆ:-

| ಕ್ರ.ಸಂ | ಜಿಲ್ಲೆ | ಕೇಂದ್ರಸ್ಥಾನ |
|---|---|---|
| 1 | ಚಿಕ್ಕಮಗಳೂರು | ಮೂಡಿಗೆರೆ |
| 2 | ಹಾಸನ | ಸಕಲೇಶಪುರ |
| 3 | ಮೈಸೂರು | ಹುಣಸೂರು |
| 4 | ಕೊಡಗು | ಮಡಿಕೇರಿ |

2. ಈ ಟಾಸ್ಕ್ ಫೋರ್ಸ್‌ಗಳು ಆಯಾ ಅರಣ್ಯ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವರ ನಿರ್ದೇಶನದ ಅಡಿಯಲ್ಲಿ ಕಾರ್ಯ ನಿರ್ವಹಿಸತಕ್ಕದ್ದು.

...2

3. ಈ ಜಿಲ್ಲಾ ಟಾಸ್ಕ ಪೋರ್ಸ್ ತಂಡಗಳು ಕಾಡಾನೆ ಹಾವಳಿ ಇರುವ ಪ್ರದೇಶಗಳಲ್ಲಿ ಗಸ್ತು ತಿರುಗುವುದು ಮತ್ತು ಜನ ವಸತಿ ಪ್ರದೇಶಗಳಲ್ಲಿ, ಕೃಷಿ ಪ್ರದೇಶಗಳಲ್ಲಿ ಹಾಗೂ ಕಾಫಿ ಎಸ್ಟೇಟ್‌ಗಳಲ್ಲಿ ಆನೆಗಳ ಚಲನವಲನಗಳನ್ನು ಗುರುತಿಸಿ ಕೂಡಲೇ ಸ್ಥಳಕ್ಕೆ ಧಾವಿಸಿ ಆನೆಗಳನ್ನು ಅರಣ್ಯ ಪ್ರದೇಶಕ್ಕೆ ಹಿಮ್ಮೆಟ್ಟಿಸುವುದು.
4. ಕಾಡಾನೆ ಹಾವಳಿ ಕಂಡು ಬರುವ ಪ್ರದೇಶಗಳ ಹಳ್ಳಿಗಳಲ್ಲಿನ ಸಾರ್ವಜನಿಕರಿಗೆ ಆನೆಗಳ ಚಲನವಲನ ಕುರಿತು ಮಾಹಿತಿ ನೀಡುವುದಲ್ಲದೇ ಅರಣ್ಯ ಪ್ರದೇಶದ ಒಳಗೆ ಸಂಚರಿಸಿದಂತೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಿ ಪ್ರಚುರ ಪಡಿಸುವುದು.
5. ಪ್ರತಿ ಟಾಸ್ಕ್ ಪೋರ್ಸ್‌ನ ಕೇಂದ್ರಸ್ಥಾನದಲ್ಲಿ Control Room (ನಿಯಂತ್ರಣ ಕೊಠಡಿ) ಕಾರ್ಯನಿರ್ವಹಿಸತಕ್ಕದ್ದು ಮತ್ತು Control Room ನ ದೂರವಾಣಿ ಸಂಖ್ಯೆಯನ್ನು ಸಾರ್ವಜನಿಕರಲ್ಲಿ ಪ್ರಚುರ ಪಡಿಸುವುದು.
6. ಈ ಟಾಸ್ಕ್ ಪೋರ್ಸ್‌ಗಳಿಗೆ ಆನೆ ಹಾವಳಿ ತಡೆಗಟ್ಟುವ/ಹಿಮ್ಮೆಟಿಸುವ ಕಾರ್ಯಕ್ಕೆ ಬೇಕಾಗುವ ವಾಕಿಟಾಕಿ, ಬಂದೂಕು, ಪಟಾಕಿ ಹಾಗೂ ಸರ್ವಾಜನಿಕ ಜಾಗೃತಿ ಮೂಡಿಸಲು ಉಪಯೋಗಿತ ಸಲಕರಣೆಗಳು ಹಾಗೂ ಇನ್ನಿತರೇ ಅವಶ್ಯಕ ಸಲಕರಣೆ ಮತ್ತು ಸೌಲಭ್ಯಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರು ಒದಗಿಸುವುದು.
7. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಇವರು ಪ್ರತಿ ಜಿಲ್ಲೆಯ ಟಾಸ್ಕ್ ಪೋರ್ಸ್‌ಗೆ ವಲಯಾರಣ್ಯಾಧಿಕಾರಿ, ಉಪವಲಯಾರಣ್ಯಾಧಿಕಾರಿ ಮತ್ತು ಅರಣ್ಯ ರಕ್ಷಕರನ್ನು ಸ್ಥಳನಿಯುಕ್ತಿಗೊಳಿಸಿ ಕೂಡಲೇ ಆದೇಶ ಹೊರಡಿಸಲು ಕ್ರಮವಹಿಸತಕ್ಕದ್ದು.
8. ಸದರಿ ಟಾಸ್ಕ್ ಪೋರ್ಸ್‌ಗಳು ಆನೆ ಹಾವಳಿ ಪ್ರದೇಶಗಳಿಗೆ ಶೀಘ್ರವಾಗಿ ತಲುಪಲು ಅನುವಾಗುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಇವರು ಪ್ರತಿ ಜಿಲ್ಲೆಯ ಟಾಸ್ಕ್ ಪೋರ್ಸ್‌ಗೆ 03 ಬೊಲೇರೋ ಜೀಪ್‌ಗಳನ್ನು ಒದಗಿಸತಕ್ಕದ್ದು. ಇದ್ದಲ್ಲದೆ 02 Canter ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ನಿಯೋಜಿಸತಕ್ಕದ್ದು.
9. ಕಾಡಾನೆ ದಾಳಿ ತಡೆಗಟ್ಟುವ/ಆನೆಗಳನ್ನು ಹಿಮ್ಮೆಟ್ಟಿಸುವ ಸಂದರ್ಭಗಳಲ್ಲಿ ಸ್ಥಳೀಯ ಪೊಲೀಸ್ ಇಲಾಖೆಯ ಸಹಾಯ ಪಡೆಯತಕ್ಕದ್ದು.

ಈ ಸರ್ಕಾರದ ಆದೇಶವನ್ನು ಕೂಡಲೇ ಅನುಷ್ಠಾನಗೊಳಿಸಲು ಹಾಗೂ ಈ ಟಾಸ್ಕ್ ಪೋರ್ಸ್‌ಗಳು ಕಾರ್ಯಪ್ರವೃತ್ತರಾಗುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಲ್ಲಿ,

(ಜಿ. ಮಂಜುಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಅರಣ್ಯ-ಎ)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ / ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.

...3

2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಪಮು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
5. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಆಡಳಿತ ಮತ್ತು ಸಮನ್ವಯ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
6. ಜಿಲ್ಲಾ ಪೊಲೀಸ್ ಅಧೀಕ್ಷಕರು, ಟಾಸ್ಕ್ ಫೋರ್ಸ್‌ನ ಸಂಬಂಧಪಟ್ಟ ಜಿಲ್ಲೆ.
7. ಸನ್ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಅರಣ್ಯ) ರವರ ಆಪ್ತ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಜಂಟಿ ಕಾರ್ಯದರ್ಶಿ (ಅರಣ್ಯ) ರವರ ಆಪ್ತ ಸಹಾಯಕರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಶಾಖಾ ರಕ್ಷಾ ಕಡತ